ಮಾಡುವುದಾದರೆ ಅವರಿಗೆ ನೀವು ಬಿಟ್ಟುಬಿಡಿ. ಅವರು ಹೇಳುವುದನ್ನು ಕೇಳುವುದಕ್ಕೆ ಹೋಗಬೇಡಿ. You can bring a law. Law ಮಾಡುವವರು ನಾವಲ್ಲವೇನು? ಇದಕ್ಕೆ ಸಂಬಂಧಪಟ್ಟಂತೆ ಸಭೆ ಕರೆಯುತ್ತಾರೆ ಬಿಡಿ.

ಶ್ರೀ ವಿ. ಸುನೀಲ್ ಕುಮಾರ್: ಮಾನ್ಯ ಅಧ್ಯಕ್ಷರೆ, ತಾವು ಅಭಿವೃದ್ಧಿ ವಿಚಾರ ಹೇಳಿದ್ದೀರಿ. ಆದರೆ ನಕ್ಸಲರ ಶರಣಾಗತಿಯ ಬಗ್ಗೆ ಹೇಳಬೇಕಲ್ಲವೇ?

ಅಧ್ಯಕ್ಷರು: ಮಾನ್ಯ ಗೃಹಸಚಿವರು ಮೀಟಿಂಗ್ ಕರೆದು ಚರ್ಚೆಯನ್ನು ಖಂಡಿತವಾಗಿ ಮಾಡುತ್ತಾರೆ. ಡಾ॥ ಕೆ. ಸುಧಾಕರ್ ಪ್ರಶ್ನೆಯನ್ನು ಕೇಳಬೇಕಾಗಿದ್ದು ಅವರು ಸದನದಲ್ಲಿ ಇಲ್ಲ. ಶ್ರೀ ಎಂ.ಕೃಷ್ಣಾರೆಡ್ಡಿಯವರೆ ತಾವು ಪ್ರಶ್ನೆಯನ್ನು ಕೇಳಿ.

ಹೈನುಗಾರಿಕೆ ವೃತ್ತಿಯಲ್ಲಿ ತೊಡಗಿರುವ ರೈತರು

05 (14); ಶ್ರೀ ಕೃಷ್ಣಾರೆಡ್ಡಿ ಎಂ (ಚಿಂತಾಮಣಿ)

ಅ) ಚಿಂತಾಮಣಿ ತಾಲ್ಲೂಕಿನಲ್ಲಿ ಹೈನುಗಾರಿಕೆ ವೃತ್ತಿಯಲ್ಲಿ ತೊಡಗಿರುವ ರೈತರ ಸಂಖ್ಯೆ ಎಷ್ಟು (ಮಾಹಿತಿ ನೀಡುವುದು);

ಆ) ಹೈನುಗಾರಿಕೆ ವೃತ್ತಿಯಲ್ಲಿ ತೊಡಗಿರುವ ರೈತರಿಗೆ ಸರ್ಕಾರದ ವತಿಯಿಂದ ಯಾವ್ಯಾವ ಯೋಜನೆಗಳನ್ನು ಜಾರಿಗೊಳಿಸಲಾಗಿದೆ (ಮಾಹಿತಿ ನೀಡುವುದು):

ಇ) ಹೈನುಗಾರಿಕೆ ವೃತ್ತಿಯಲ್ಲಿ ತೊಡಗಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನಾಂಗದವರಿಗೆ ವಿಶೇಷ ಯೋಜನೆಗಳನ್ನು ರೂಪಿಸಲಾಗಿದೆಯೇ (ಮಾಹಿತಿ ನೀಡುವುದು)?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು)

ಅ) ಚಿಂತಾಮಣಿ ತಾಲ್ಲೂಕಿನಲ್ಲಿ ಹೈನುಗಾರಿಕೆ ವೃತ್ತಿಯಲ್ಲಿ ತೊಡಗಿರುವ ರೈತರ ಸಂಖ್ಯೆ: 27576

ಆ) ಹೈನುಗಾರಿಕೆ ವೃತ್ತಿಯಲ್ಲಿ ತೊಡಗಿರುವ ರೈತರಿಗೆ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖಾ ವತಿಯಿಂದ 2014–15ನೇ ಸಾಲಿನಲ್ಲಿ ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

1. **ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅಡಿಯಲ್ಲಿ**
   ಅ) ಆಧುನಿಕ ಹೈನುಗಾರಿಕೆಗಾಗಿ ಪ್ರೋತ್ಸಾಹ
   ಆ) ಮೇವಿನ ಕಿರುಪೊಟ್ಟಣಗಳ ವಿತರಣೆ
   ಇ) ಮೇವಿನ ಕೋಯ್ಲು ಉಪಕರಣಗಳ ಸರಬರಾಜು
2. ರಾಜ್ಯದ ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನ
3. ವಿಶೇಷ ಘಟಕ ಯೋಜನೆ
4. ಗಿರಿಜನ ಉಪ ಯೋಜನೆ
5. ಅಮೃತ ಯೋಜನೆ
6. ರಾಜ್ಯದ ಹಾಲು ಉತ್ಪಾದಕರಿಗೆ ನೀಡುವ ಪ್ರೋತ್ಸಾಹ ಧನದಲ್ಲಿ ಉಳಿಕೆಯಾಗುವ ಅನುದಾನದಲ್ಲಿ ಹೈನುರಾಸು ಘಟಕಗಳನ್ನು ನೀಡಲು ವಿಶೇಷ ಯೋಜನೆ ರೂಪಿಸಲಾಗಿದೆ.

ಇ) ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖಾ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನಾಂಗದವರಿಗೆ ಹೈನುಗಾರಿಕೆಯಲ್ಲಿ ತೊಡಗಿಸಿಕೊಳ್ಳಲು ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

1. **ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅಡಿಯಲ್ಲಿ**
   ಅ) ಆಧುನಿಕ ಹೈನುಗಾರಿಕೆಗಾಗಿ ಪ್ರೋತ್ಸಾಹ
   ಆ) ಮೇವಿನ ಕಿರುಪೊಟ್ಟಣಗಳ ವಿತರಣೆ
   ಇ) ಮೇವಿನ ಕೋಯ್ಲು ಉಪಕರಣಗಳ ಸರಬರಾಜು
2. ರಾಜ್ಯದ ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನ
3. ವಿಶೇಷ ಘಟಕ ಯೋಜನೆ
4. ಗಿರಿಜನ ಉಪ ಯೋಜನೆ
5. ಅಮೃತ ಯೋಜನೆ

ಅ) ವಿಶೇಷ ಘಟಕ ಯೋಜನೆ

ಆ) ಗಿರಿಜನ ಉಪ ಯೋಜನೆ

6. ರಾಜ್ಯದ ಹಾಲು ಉತ್ಪಾದಕರಿಗೆ ನೀಡುವ ಪ್ರೋತ್ಸಾಹ ಧನದಲ್ಲಿ ಉಳಿಕೆಯಾಗುವ ಅನುದಾನದಲ್ಲಿ ಹೈನುರಾಸು ಘಟಕಗಳನ್ನು ನೀಡಲು ವಿಶೇಷ ಯೋಜನೆ ರೂಪಿಸಲಾಗಿದೆ.

ಶ್ರೀ ಕೃಷ್ಣಾರೆಡ್ಡಿ ಎಂ.: ಮಾನ್ಯ ಅಧ್ಯಕ್ಷರೆ, ಚಿಂತಾಮಣಿ ತಾಲ್ಲೂಕಿನಲ್ಲಿ ಹೈನುಗಾರಿಕೆ ವೃತ್ತಿಯಲ್ಲಿ ತೊಡಗಿರುವ ರೈತರ ಸಂಖ್ಯೆ:27,576 ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ಇದರಲ್ಲಿ ಕೆಲವು ಯೋಜನೆಗಳನ್ನು ರೂಪಿಸಿದ್ದಾರೆ. ಆದರೆ ಈ ಯೋಜನೆಗಳಲ್ಲಿ ಇವು ಬಹಳಷ್ಟು ಕಡಿಮೆ ಯೋಜನೆಗಳಾಗಿವೆ. ಆಧುನಿಕ ಹೈನುಗಾರಿಕೆಗಾಗಿ ಪ್ರೋತ್ಸಾಹ, ಮೇವಿನ ಕಿರುಪೊಟ್ಟಣಗಳ ವಿತರಣೆ ಎನ್ನುವಂತಹದ್ದು ಇದೆ.

ಅಧ್ಯಕ್ಷರು: ಮಾನ್ಯ ರೆಡ್ಡಿಯವರೆ ತಾವು ಪ್ರಶ್ನೆಯನ್ನು ಕೇಳಿ.

ಶ್ರೀ ಕೃಷ್ಣಾರೆಡ್ಡಿ ಎಂ.: ಈ ಯೋಜನೆಗಳ ಬಗ್ಗೆ ಇಷ್ಟು ದೊಡ್ಡ ಪ್ರಮಾಣದಲ್ಲಿ ರೈತರು ಇರಬೇಕಾದರೆ ಯೋಜನೆಗಳು 50, 60, 100 ಫಲಾನುಭವಿಗಳನ್ನು ಆಯ್ಕೆ ಮಾಡಿ ಎಂದು ಇವರು ಹೇಳುತ್ತಾರೆ. 100 ಫಲಾನುಭವಿಗಳನ್ನು ಆಯ್ಕೆ ಮಾಡುವುದರಲ್ಲಿ ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಸದಸ್ಯರುಗಳಿಗೆ ಇಷ್ಟು ಕೊಡಬೇಕು. ಇದರಿಂದ ನಮಗೆ ತಾರತಮ್ಯವಾಗುತ್ತಿದೆ. ಈ ಬಗ್ಗೆ ಮಾನ್ಯ ಸಚಿವರು ಸ್ಪಷ್ಟವಾದ ನಿಲುವನ್ನು ತಿಳಿಸಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಯಲ್ಲಿ ಯಾವ ಯಾವ ರೀತಿಯ ಯೋಜನೆಗಳು ಇರಬೇಕೆಂದು ಪ್ರಶ್ನೆಯನ್ನು ಕೇಳಿದ್ದಾರೆ. ಆ ಬಗ್ಗೆ ಸಮಗ್ರವಾಗಿ ಉತ್ತರವನ್ನು ಕೊಟ್ಟಿದ್ದೇನೆ. ಆದರೆ ಕೊಟ್ಟಿರುವಂತಹ ಪ್ರಮಾಣ ಕಡಿಮೆ ಎನ್ನುವಂತಹದ್ದು ಅವರ ಬಯಕೆಯಾಗಿದೆ. ಇರುವಂತಹದ್ದನ್ನು ಪ್ರತಿ ತಾಲ್ಲೂಕಿಗೂ ಕೂಡ ಎಲ್ಲರಿಗೂ ಕೊಡುವಂತಹ ಪ್ರಾಮಾಣಿಕವಾದಂತಹ ಪ್ರಯತ್ನವನ್ನು

ಮಾಡಿದ್ದೇನೆ. ಇಲ್ಲಿ ಕೊಟ್ಟಿರುವಂತಹದ್ದು ಕಡಿಮೆ ಎಂದು ಹೇಳಿದಾಗ ಇದಕ್ಕೆ ಕಾರಣವೇನೆಂದರೆ ನಾವು SCP/TSP ಯಲ್ಲಿ ಈ ಸಾರಿ ಸಾಕಷ್ಟು ರೀತಿಯಲ್ಲಿ ಫಲಾನುಭವಿಗಳನ್ನು ಗುರುತಿಸುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ನಮ್ಮ ಇಲಾಖೆಯಲ್ಲಿ SCP/TSPಗೋಸ್ಕರ ಈಗ ಉಳಿತಾಯವಾಗಿರುವಂತಹ 103 ಕೋಟಿ ರೂಪಾಯಿಗಳಲ್ಲಿ 13,000ಕ್ಕೂ ಹೆಚ್ಚು ಹಸುಗಳನ್ನು, ಎಮ್ಮೆಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಅದರಲ್ಲಿ ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡದವರಿಗೆ 75% ಕೊಡುವಂತಹದ್ದು ಇದೆ. ಆ ಕಾರಣಕೋಸ್ಕರ ನಿಮಗೆ ಜಾಸ್ತಿ ಮಾಡಬೇಕೆಂದರೆ ನಮ್ಮ ಉಳಿತಾಯದ ಹಣದಲ್ಲಿ ಎಲ್ಲರಿಗೂ ಕೊಡುವಂತಹ ಕೆಲಸವನ್ನು ಮಾಡಿದ್ದೇವೆ. ಬಹುಶಃ ಇದು ಒಂದು ದಿಟ್ಟವಾದ ಹೆಜ್ಜೆಯಾಗಿದೆ. ಪ್ರಪ್ರಥಮವಾಗಿ ಎಲ್ಲಾ ತಾಲ್ಲೂಕುಗಳಿಗೂ ಸಹ ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡದವರಿಗೆ ಕೊಡುತ್ತಿರುವಂತಹ ಸೌಲಭ್ಯಗಳಾಗಿದೆ. ತಾವು ಕೊರತೆ ಇದೆ ಎಂದು ಹೇಳಿದ್ದೀರಿ, ಅದನ್ನು ಸರಿದೂಗಿಸುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ. ದಯಮಾಡಿ ಮಾನ್ಯ ಸದಸ್ಯರು ಅರ್ಥಮಾಡಿಕೊಳ್ಳಬೇಕು.

ಅಧ್ಯಕ್ಷರು: O.K. ಮಾನ್ಯ ಸದಸ್ಯರಾದ ಶ್ರೀ ಶಿವಾನಂದ ಎಸ್ ಪಾಟೀಲ್‌ರವರು ಸದನದಲ್ಲಿ ಇಲ್ಲ. ಶ್ರೀ ಬಾಲಕೃಷ್ಣ ಸಿ.ಎನ್. ಸದನದಲ್ಲಿ ಇಲ್ಲ. ಈಗ ಪ್ರಶ್ನೋತ್ತರವು ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವಂತಹ ಪ್ರಶ್ನೆಗಳನ್ನು ಸದನದ ಮುಂದೆ ಮಂಡಿಸಬೇಕು.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ:03.02.2015ರ ಒಂದನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವಂತಹ 159 ಪ್ರಶ್ನೆಗಳ ಪೈಕಿ 85 ಪ್ರಶ್ನೆಗಳ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.